**ಅಸಲು ದಾವಾ ನಂ:44/2021**
**ಪಿ.ಡಬ್ಲ್ಯೂ:01**

**<u>ದಿನಾಂಕ: 29-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು: ಶ್ರೀಮತಿ ಡಿ ಕೆ ಎಸ್ ಪ್ರತಿವಾದಿ ಪರ ವಕೀಲರಿಂದ</u>

ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ 5 ಜನ ಭಾಗಸ್ಥರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನನ್ನು ಒಳಗೊಂಡಂತೆ ಪೂರ್ವ ದಿಕ್ಕಿಗೆ ಇರುವ ಜಮೀನಿಗೆ ಎಷ್ಟು ಜನರು ಭಾಗಸ್ಥರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಿಪ್ಪೇಸ್ವಾಮಿ, ಬೋಮಣ್ಣ, ಜಯಣ್ಣ ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಬರುತ್ತಾರೆ. ನಿಪಿ:14 ರಲ್ಲಿ ಸ್ವತ್ತಿನ ಚೆಕ್ ಬಂದಿಯಲ್ಲಿ ಪೂರ್ವ ದಿಕ್ಕಿಗೆ ಪ್ರತಿವಾದಿಯರ ಜಮೀನು ಇರುವುದಿಲ್ಲವೆಂದು ನಮೂದಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.21/2 ಎ ಅಂದರೆ 14 ಎಕರೆ 9 ಗುಂಟೆ ಇರುತ್ತದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಅಣ್ಣ ತಮ್ಮಂದಿರು ಒಟ್ಟು 5 ಜನ ದಿ:25-01-2000 ರಲ್ಲಿ ಪಾಲುವಿಭಾಗ ಮಾಡಿಕೊಂಡಿದ್ದು, ಸದರಿ ಪಾಲುವಿಭಾಗದಂತೆ ಕೌಂಟರ್ ಕ್ಲೇಮ್ ಸ್ವತ್ತು ಪ್ರತಿವಾದಿಯರ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಕೌಂಟರ್ ಕ್ಲೇಮ್ ಷೆಡ್ಯೂಲ್ ಸ್ವತ್ತಿನ ಪಶ್ಚಿಮ ದಿಕ್ಕಿಗೆ ತಿಪ್ಪೇಸ್ವಾಮಿ, ಕರಿಯಮ್ಮ, ಬೋಮಣ್ಣ ಮತ್ತು ಜಯಣ್ಣರವರ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಅದರ ಜೊತೆಗೆ ನನ್ನ ಜಮೀನು ಬಂದಿದ್ದು, ನನ್ನ ಜಮೀನಿನ ನಂತರ ಕರಿಯಮ್ಮರವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರ ಜಮೀನಿನ ಪಶ್ಚಿಮಕ್ಕೆ ಇರುವ ಕರಿಯಮ್ಮ, ಬೋಮಣ್ಣ, ತಿಪ್ಪೇಸ್ವಾಮಿ ಮತ್ತು ಜಯಣ್ಣರವರ ಜಮೀನನ್ನು ಅಳತೆ ಮಾಡಿಸಿ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ತಿಳಿದುಕೊಂಡಿರುವುದಿಲ್ಲ. ನಾನು ಮತ್ತು ಪ್ರತಿವಾದಿಯರು ಅಕ್ಕಪಕ್ಕದ ಜಮೀನಿನವರು ಅಲ್ಲ ಎಂದರೆ ಸರಿಯಲ್ಲ.

ನಮ್ಮ ಜಮೀನಿಗೆ ಹೊಂದಿಕೊಂಡು ಪೂರ್ವಕ್ಕೆ ಪ್ರತಿವಾದಿಯರ ಜಮೀನು ಬರುತ್ತದೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು ಆದರೆ ನೆನಪಿಲ್ಲ. ನಾನು ಯಾವುದೇ ಆಧಾರ ಇಲ್ಲದೆ ನನ್ನ ಜಮೀನಿನ ಚೆಕ್ ಬಂದಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು 1974 ರಲ್ಲಿ ಖರೀದಿಸಿದ ಜಮೀನು ಪಶ್ಚಿಮ ದಿಕ್ಕಿನ 15 ಎಕರೆ 20 ಗುಂಟೆಯಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪೂರ್ವ ಭಾಗದ 14 ಎಕರೆ 19 ಗುಂಟೆ ಜಮೀನಿನಲ್ಲಿ ನನಗಾಗಲೀ ಬೇರೆ ಯಾರೇ ವ್ಯಕ್ತಿಗಾಗಲೀ ಹಕ್ಕು ಅಧಿಕಾರ ಸ್ವಾಧೀನಾನುಭವ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಜಮೀನನ್ನು ಹೊರತುಪಡಿಸಿ ಬೇರೆ

ಜಮೀನಿನ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಶ್ಚಿಮ ದಿಕ್ಕಿನ 15 ಎಕರೆ 20 ಗುಂಟೆ ಜಮೀನನ್ನು ಅಳತೆ ಮಾಡಿಸಿದರೆ ನನ್ನ ಜಮೀನನ್ನು ಎಲ್ಲಿ ಬರುತ್ತದೆ ಎಂಬ ವಿಚಾರ ತಿಳಿಯಬಹುದಾಗಿದ್ದರೂ ನಾನು ಅಳತೆ ಕಾರ್ಯ ಮಾಡಿಸಲು ಮುಂದಾಗಿಲ್ಲ ಎಂದರೆ ಸಾಕ್ಷಿಯು ಜಮೀನನ್ನು ಖರೀದಿಸುವಾಗ ಅಳತೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಅಳತೆ ಮಾಡಿಸಿ ನಮ್ಮ ಜಮೀನಿನ ವಿಸ್ತೀರ್ಣವನ್ನು ತಿಳಿದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಜಮೀನನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸ್ವಾಧೀನ ಪಡಿಸಿಕೊಳ್ಳದೆ ಇರುವ ಕಾರಣ ನಾವು ಅಳತೆ ಕಾರ್ಯ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ಜಮೀನು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯರು ಆಜುಬಾಜಿನ ಜಮೀನು ಹೊಂದಿಲ್ಲದ ಕಾರಣ, ನನಗೂ ಮತ್ತು ಪ್ರತಿವಾದಿಯರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಜಮೀನಿನ ಸ್ವಾಧೀನದಲ್ಲಿ ಇಲ್ಲದೆ ಇರುವ ಕಾರಣ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.